# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.462/2016 ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರವಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 30- 01 -2026. |

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ಹುಚ್ಚಯ್ಯ ಅಲಿಯಾಸ್ ಚಿನ್ನ ಸ್ವಾಮಿರವರು ನನ್ನ ತಂದೆ ಎಂದರೆ ಸರಿ. ಹುಚ್ಚಯ್ಯ ನವರು ಮೊದಲನೆ ಹೆಂಡತಿ ಪ್ರತಿವಾದಿ ಒಂದು ಎಂದರೆ ಸರಿ. ಮತ್ತು ಪಾರ್ವತಮ್ಮರವರು 2 ನೇ ಹೆಂಡತಿ ಎಂದರೆ ಸರಿ. 1 ನೇ ಪ್ರತಿವಾದಿಗೆ ನಾನು ಒಬ್ಬನೇ ಮಗ ಎಂದರೆ ಸರಿ. ಜ್ಯೋತಿ ಮತ್ತು ಮಹೇಶ ಪಾರ್ವತಮ್ಮರವರ ಮಕ್ಕಳು ಎಂದರೆ ಸರಿ. ದಾವಾ ಆಸ್ತಿಗಳು ಪಿತಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳು ವಾದಿ ಮತ್ತು ನಮ್ಮ ಜಂಟಿ ಸ್ವಾಧೀನದಲ್ಲಿ ಇರುವುದಿಲ್ಲ. ದಾವಾ ಆಸ್ತಿಯ ಮನೆ ಮತ್ತು ಜಮೀನು ಬಂಚಳ್ಳಿ ಹುಂಡಿ ಗ್ರಾಮಕ್ಕೆ ಸೇರಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳು ಚಿನ್ನಸ್ವಾಮಿ ಅಲಿಯಾಸ್ ಹುಚ್ಚಯ್ಯರವರ ಹೆಸರಿನಲ್ಲಿ ಖಾತೆ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ನನ್ನ ತಾತರವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಚಿನ್ನಸ್ವಾಮಿ ಅಲಿಯಾಸ್ ಹುಚ್ಚಯ್ಯರವರು ಮೃತ ಹೊಂದಿದ ನಂತರ ಸದರಿ ದಾವಾ ಶೆಡ್ಯೂಲ್ ಸ್ವತ್ತು ನಮ್ಮ ಸ್ವಾಧಿನಾನುಭವದಲ್ಲಿ ಇರುತ್ತದೆ ಎಂದರೆ ಸರಿ. ಚಿನ್ನಸ್ವಾಮಿ ಅಲಿಯಾಸ್ ಹುಚ್ಚಯ್ಯರವರು ಮೃತ ಹೊಂದಿದ ಬಳಿಕ ದಾವಾ ಷೆಡೂಲ್ ಸ್ವತ್ತು ನಾವು ನಮ್ಮ ಹೆಸರಿನಲ್ಲಿ ಅಕ್ರಮವಾಗಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯವರು ಹೇಳಿದ ಪ್ರಕರಣ ನೀವು ಯಾವುದೇ ದಾಖಲೆಗಳನ್ನು ಮಾಡದೇ ಅಕ್ರಮವಾಗಿ ಮಾಡಿಕೊಂಡಿರುತ್ತೀರಿ ಎಂದು

ಹೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಅಕ್ರಮವಾಗಿ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಅಕ್ರಮವಾಗಿ ಪಡೆದುಕೊಂಡ ಕಾರಣದಿಂದ ವಾದಿಯವರು ನಿಮಗೆ ಅನೇಕ ಬಾರಿ ಬಂದು ಭಾಗಾಂಶ ಕೊಡಿ ಎಂದು ಕೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮಗೆ ಬಂದು ಅವರು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನ ಆರ್ ಸಿ ಸಿ ಮನೆ ಚಿನ್ನಸ್ವಾಮಿ ಅಲಿಯಾಸ್ ಹುಚ್ಚಯ್ಯರವರಿಗೆ ಸೇರಿರುತ್ತದೆ ಎಂದರೆ ಸರಿ.

ಅವರು ಜೀವಿತ ಕಾಲದಲ್ಲಿ ಸೌತ್ ಇಂಡಿಯಾ ಪೇಪರ್ ಮಿಲ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಮತ್ತು ಅವರು ಮೃತ ಪಟ್ಟ ಬಳಿಕ ನಾನು ಸೌತ್ ಇಂಡಿಯಾ ಪೇಪರ್ ಮಿಲ್ಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ವಾದಿಯ ತಾಯಿ ಪಾರ್ವತಮ್ಮ ಸೌತ್ ಇಂಡಿಯಾ ಪೇಪರ್ ಮಿಲ್ಸ್ ನಲ್ಲಿ ಕೆಲಸ ಮಾಡಲು ಒಪ್ಪಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಸಾಕ್ಷಿಯು ನನಗೆ ಒಪ್ಪಿಗೆಯನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಈಗಲು ಸಹ ನಾನು ಸೌತ್ ಇಂಡಿಯಾ ಪೇಪರ್ ಮಿಲ್ಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ ಮತ್ತು ನನಗೆ 40 ಸಾವಿರ ಸಂಬಳ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನ ಆರ್ ಸಿ ಸಿ ಮನೆ 40 ಇಂಟು 60 ವಿಸ್ತೀರ್ಣ ಆಗಿರುತ್ತದೆ ಎಂದರೆ ಸರಿಯಲ್ಲ. ಚಿನ್ನಸ್ವಾಮಿ ಅಲಿಯಾಸ್ ಹುಚ್ಚಯ್ಯನವರು ಬದುಕಿದ್ದಾಗ ಪಾರ್ವತಮ್ಮ ರವರ ಜೊತೆಗೆ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಚಿನ್ನಸ್ವಾಮಿ ಅಲಿಯಾಸ್ ಹುಚ್ಚಯ್ಯನವವರ ಹೆಸರಿನಲ್ಲಿ ಎಷ್ಟು ಆಸ್ತಿಗಳು ಇವೆ ಎಂಬ ಪ್ರಶ್ನೆಗೆ ಸಾಕ್ಷಿಯು ಈವಾಗ ಅವರ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯವರಿಗೆ ನೀವು ಆಸ್ತಿಯನ್ನು ನೀಡಿರುತ್ತೀರಾ ಎಂದು ಹೇಳಿರುತ್ತೀರಾ ಮತ್ತು ಎಷ್ಟು ಆಸ್ತಿಯನ್ನು ನೀಡಿರುವೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ವಾದಿಯವರ ತಾಯಿ ಪಾರ್ವತಮ್ಮರವರು ಈ ನ್ಯಾಯಾಲದಲ್ಲಿಯೇ ಒಟ್ಟು ಕುಟುಂಬದ ಆಸ್ತಿಯನ್ನು ಮತ್ತು ಸೌತ್ ಇಂಡಿಯಾ

ಪೇಪರ್ ಮಿಲ್ಸ್ ಕಂಪನಿಯ ಮೇಲೂ ಕೂಡ ಭಾಗಾಂಶವನ್ನು ಕೇಳಿ ದಾವಾ ಹಾಕಿರುತ್ತಾರೆ 1 ಮತ್ತು 2 ನೇ ವಾದಿಯವರು ಅಪ್ರಾಪ್ತ ವಯಸ್ಕರಾಗಿದ್ದ ಕಾರಣದಿಂದ ಅವರು ಹಣದ ರೂಪದಲ್ಲಿ ಭಾಗಾಂಶವನ್ನು ಪಡೆದುಕೊಂಡಿರುತ್ತಾರೆ. ಅವರು ಇದನ್ನು ಮರೆಮಾಚಿ ಅವರು ಮೇಜರ್ ಆದ್ದ ಬಳಿಕ ಈಗ ಮತ್ತೆ ದಾವೆಯನ್ನು ಹೂಡಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಶೆಡ್ಯೂಲ್ ಸ್ವತ್ತಿನ ಕಲ್ಲರ್ ಶೀಟ್ ಮನೆ ನನ್ನ ಹೆಸರಿನಲ್ಲಿ ಇರುತ್ತದೆ. ಮತ್ತು ನನ್ನ ತಾಯಿ ಹೆಸರಿನಲ್ಲಿ 34 ಇಂಟು 35 ವಿಸ್ತೀರ್ಣ ಉಳ್ಳ ಮನೆ ಇರುತ್ತದೆ ಎಂದರೆ ಸರಿ. ಸೌತ್ ಇಂಡಿಯಾ ಪೇಪರ್ ಮಿಲ್ಸ್ ಗೆ ಸಂಬಂಧಪಟ್ಟ ಒಪ್ಪಿಗೆಯನ್ನು ನೀವು ನೀಡಿರುತ್ತೀರಾ ಮತ್ತು ಆಸ್ತಿಗೆ ಸಂಬಂಧಪಟ್ಟ ಒಪ್ಪಿಗೆಯನ್ನು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಎಲ್ಲಾ ಆಸ್ತಿಗಳಿಗೂ ಸಹ ಒಪ್ಪಿಗೆಯನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**